ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರ ದೊರಕಲಿಲ್ಲ. ಇಷ್ಟೆಲ್ಲಾ ದೊಡ್ಡ ದೊಡ್ಡ ಇಲಾಖೆಗಳು ಇದ್ದರೂ ಈ ಒಂದು ಪ್ರಶ್ನೆಯ ಬಗ್ಗೆ ಪೂರ್ತಿಯಾಗಿ ವಿವರಗಳು ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನಲ್ಲಿ ಎಲ್ಲ ಅಂಕಿ ಅಂಶಗಳೂ ಸಿದ್ಧವಾಗಿವೆ. ನಾನು ಅವನ್ನು ಸಭೆಯ ಮುಂದೆ ಇಡುವುದಕ್ಕೆ ಸಿದ್ಧ. ಅವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದೆ.

ಶ್ರೀ ಜೆ. ಎಲ್. ಕಬಾಡಿ.—ಪ್ರತಿಯೊಂದು ವಿಭಾಗದಲ್ಲಿಯೂ ಪ್ರತ್ಯೇಕವಾದಂಥ ಅಂಕಿ ಸಂಖ್ಯೆಗಳನ್ನು ಪಡೆದು ವಿಚಾರಣೆ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಿಸುವುದರ ಮೂಲಕ ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಷೆಡ್ಯೂಲ್ಡ್ ಟ್ರೈಬ್ಸ್‌ಗಳಿಗೆ ಸರಿಯಾದ ರೀತಿಯಲ್ಲಿ ಪ್ರಾತಿನಿಧ್ಯ ದೊರಕಿದೆಯೇ ಇಲ್ಲವೇ ಎಂಬುದನ್ನು ವಿಚಾರಣೆ ಮಾಡುವುದಕ್ಕೆ ಈ ಸದನದ ಮಾನ್ಯ ಸದಸ್ಯರ ಒಂದು ಸಮಿತಿಯನ್ನು ನೇಮಿಸಿ ಈ ಒಂದು ಪ್ರಶ್ನೆಯನ್ನು ವಿಚಾರಣೆಗೊಳಪಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅವಶ್ಯಕತೆಯೂ ಇಲ್ಲ, ಅದು ಸಾಧ್ಯವೂ ಇಲ್ಲ. ಈ ಕೆಲಸದ ಸ್ವಭಾವ ದಿನ ದಿನಕ್ಕೂ ಬದಲಾವಣೆಯಾಗುತ್ತಿರುತ್ತದೆ. ಅದಕ್ಕನುಗುಣವಾಗಿ ಯಾವ ಯಾವ ಕೆಲಸಕ್ಕೆ ಯಾವ ಯಾವ ತರಹ ಜನರು ಬೇಕು ಕೆಲಸಕ್ಕೆ ಅಗತ್ಯ ಎಂಬುದನ್ನು ನೋಡಿಕೊಂಡು ಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳಲಾಗುವುದು. ಹಾಗೆ ಒಂದು ಕೆಲಸ ಮುಗಿದ ತರುವಾಯ ಸರ್ಕಾರದಲ್ಲಿ ಅಂಥದೇ ಕೆಲಸವಿದ್ದರೆ ಅದೇ ಜನರನ್ನು ಮತ್ತೆ ಕೆಲಸಕ್ಕೆ ಕೆಗೆದುಕೊಳ್ಳಲಾಗುತ್ತದೆ ಹಾಗೆ ಕೆಲಸವಿಲ್ಲದಿದ್ದರೆ ಆ ಜನರನ್ನು ಟರ್ಮಿನೇಟ್‌ಮಾಡುತ್ತೀವೆ.

ಶ್ರೀ ಎಂ.ಎಚ್ ಜಯಪ್ರಕಾಶನಾರಾಯಣ್.—ಮಾನ್ಯ ಸಚಿವರು ಹೇಳಿರತಕ್ಕ 151 ವಿಭಾಗಗಳಲ್ಲಿ ಕೆಲಸಮಾಡತಕ್ಕ ಒಟ್ಟು 6261 ಹುದ್ದೆಗಳಲ್ಲಿ ಇರತಕ್ಕ ನಾಲ್ಕನೇ ದರ್ಜೆಗೆ ಸೇರಿದ ಜನರಿಗೆ ಅಂದರೆ ನಿಮ್ನ ವರ್ಗ ಮತ್ತು ನಿಮ್ನ ಪಂಗಡಗಳ ಜನರಿಗೆ ಶೇಕಡ 18ರಷ್ಟು ಸ್ಥಾನಗಳು ಸಿಕ್ಕುವ ವರೆಗೂ ಆ ಸ್ಥಾನಗಳನ್ನು ಕ್ಯಾರಿಫಾರ್‌ವರ್ಡ್ ಮಾಡುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಪ್ರಶ್ನೆಯಲ್ಲಿ 7—8 ತರಹ ಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಪ್ರಶ್ನೆ ಕೇಳಿದ್ದಾರೆ. ನಾವು ಈ ಪ್ರತಿ ಒಂದು ದರ್ಜೆಯ ಹುದ್ದೆಗಳನ್ನು ಭರ್ತಿಮಾಡತಕ್ಕ ಕಾಲದಲ್ಲಿ ಅರ್ಜಿಗಳನ್ನು ಕರೆದು ಆ ವೇಳೆಯಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಕೋರಿಸಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಇಲ್ಲಿ ಅಧಿಕಾರಿಗಳು ಆಜ್ಞೆಯನ್ನು ಖಚಿತವಾಗಿ ಉಲ್ಲಂಘನೆ ಮಾಡಿದ್ದಾರೆ. ಅಂಥ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ, ಹಾಗೆ ಆಜ್ಞೆಗಳನ್ನು ಉಲ್ಲಂಘನೆ ಮಾಡಿಲ್ಲ.

Eradication of Malaria in Belgaum District

131. Sri N. B. SIRDESAI (Khanapur).—

Will the Minister for Health be pleased to state :—

(*a*) whether Government have taken any steps for the eradication of Malaria in Belgaum District ;

(*b*) whether positive Malaria parasites have been recently detected in the slides taken by the Basic Health Worker, Gunji Circle, in some villages of Khanapur Taluk ;

(*c*) whether any action has been taken by the District Health Officer, Belgaum to check the spreading of malaria ;

(*d*) if so, the nature of action taken ?

Sri H. SIDDAVEERAPPA (Minister for Health)—

(*a*) Yes.

(*b*) Yes. One positive case has been detected in Sangaragalli Village of Gunji Circle during Octob r 1974.

(c) Yes.

(*d*) (i) Mass Blood survey done.

(ii) Insecticidal spray taken up.

(iii) Radical treatment given.

Sri N. B. SIRDESAI.—With reference to the answer given by the Hon. Minister, I want to know why the Government is trying to shield the negligence and carelessness of the District Health Officer, Belgaum and supplying incorrect information to the House ?

† Sri K. T. RATHOD.—According to the information available to me, I would like to say that whatever we have furnished is perfectly alright, and if the Hon. Member says that some information is not correct, we will examine.

Sri N. B. SIRDESAI.—May I know whether the Government is aware of the fact that positive Malaria parasites care has not been taken at all ? The people of Khanapur Taluka are not aware of the radical treatment given. Therefore, I want to know whether the Government is going to investigate into the matter and take proper action against the D H.O. for his negligence ?

Sri K. T. RATHOD—Investigation does not appear to be necessary. It has come to the notice of the Government that there was only one case and the Government has already taken proper action, If the Hon. Member feels that more measures are necessary, that will be looked into.

ಶ್ರೀ ಜೆ. ಎಂ. ಕಬಾಡೆ.—ಬೆಳಗಾಂ ಜಿಲ್ಲೆಯಲ್ಲಿರತಕ್ಕ ಡಿ. ಎಚ್. ಒ. ಅವರು ಆ ಜಿಲ್ಲೆ ಅಲ್ಲದೆ ಇನ್ನೂ 4 ಜಿಲ್ಲೆಗಳ ಛಾರ್ಜಿನಲ್ಲಿದ್ದು ಅಲ್ಲಿ ಪ್ರವಾಸ ವಗೈರೆ ಕೈಗೊಳ್ಳಬೇಕಾದ್ದರಿಂದ ಈ ಜಿಲ್ಲೆಗೆ ಅವರು ಹೆಚ್ಚಿನ ನಿಗಕೊಡುವುದಕ್ಕೆ ಆಗುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಟಿ. ರಾಥೋಡ್.—ಆ ಬಗ್ಗೆ ಸರ್ಕಾರ ಈಗಾಗಲೇ ಕ್ರಮಗಳನ್ನು ಕೈಗೊಂಡಿದೆ. ಅಂಥ ತೊಂದರೆಗಳಿದ್ದರೆ ಮಾನ್ಯ ಸದಸ್ಯರು ಹೇಳಲಿ ಅದನ್ನು ಪರಿಶೀಲನೆಗಾಗುತ್ತದೆ.

Sri N. B. SIRDESAI.—May I know the contents of the report that has been submitted by the D H O. as regards the radical treatment given to the people ?

Sri K. T. RATHOD.—We have taken action as mentioned in answer to (*d*). 39 Hourses have been spread with D.D.T. in that particular village as on 1-11-1974.